ಹಾಗಾದರೆ ತಮಗೆ ಹಣಕಾಸಿನ ಕೊರತೆ ಹೇಗೆ ಬರುತ್ತದೆ. ಇನ್ನು ಎರಡನೆಯದಾಗಿ, ಮೆಟೀರಿಯಲ್ಸ್ ಅಂದರೆ ಟ್ರಾನ್ಸ್‌ಫಾರ್ಮರ್ಸ್, ಪೋಲ್ಸ್ ಮತ್ತು ವೈರ್ಸ್, ಗ್ರಾಮಾಂತರ ಪ್ರದೇಶಗಳಿಗೆ ಸಕಾಲದಲ್ಲಿ ಹೋಗುತ್ತಾ ಇಲ್ಲ. ಇದರ ಬಗ್ಗೆ ತಾವು ತುರ್ತಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವೇ. ಸುಮ್ಮನೆ ತಾವು ಒಂದು ಲಿಸ್ಟ್ ಇಟ್ಟುಕೊಂಡು ಇಷ್ಟು ಗ್ರಾಮಗಳಿಗೆ ವಿದ್ಯುದೀಕರಣ ಮಾಡುತ್ತೇವೆ ಎಂದು ಹೇಳುತ್ತಾ ಹೋಗಬೇಕಾಗಿರೇ ಹೊರತು ಮೆಟೀರಿಯಲ್ ಸಪ್ಲೈ ಆಗುತ್ತಿಲ್ಲ. ನಮಗೆ ಮೆಟೀರಿಯಲ್ಸ್ ಕೊರತೆ ಇದೆ, ಹಣಕಾಸಿನ ಕೊರತೆ ಇದೆ. ಮಾನ್ಯ ಹಣಕಾಸಿನ ಮಂತ್ರಿಗಳು ಉದಾರಿಗಳಾಗಿದ್ದಾರೆ. ನಾನು ಮಾಡುತ್ತೇನೆ ಎಂದು ಪದೇ ಪದೇ ಹೇಳುತ್ತಿದ್ದಾರೆ. ಈ ಮಾತನ್ನು ನಾನು ಕೇಳಿದ್ದೇನೆ. ಇದರ ಬಗ್ಗೆ ನೀವು ಏಕೆ ಹಿಂದು ಮುಂದು ನೋಡಂತ್ತೀರಿ.

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ಎಲೆಕ್ಟ್ರಿಸಿಟಿ ಹಾಕುವುದಕ್ಕೆ ವೈರ್ ಇಲ್ಲ. ಪೋಲ್‌ಗಳು ಇಲ್ಲ, ಬಾಕಿ ಮೆಟೀರಿಯಲ್ಸ್ ಇಲ್ಲವೆಂದು ಹೇಳುತ್ತಿದ್ದಾರೆ ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಿ ಕೆ.ಇ.ಬಿ.ಗೆ ಸಾಧ್ಯವಾದಷ್ಟೂ ಹಣವನ್ನು ಬಿಡುಗಡೆ ಮಾಡಿ ಮೆಟೀರಿಯಲ್ಸ್ ಏನುಬೇಕೋ ಅದನ್ನು ಪರ್ಚೇಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಇದ್ದೇವೆ, ಸಧ್ಯದಲ್ಲೇ ಹಣವನ್ನು ಈ ಬಾಬಿಗೆ ಬಿಡುಗಡೆ ಮಾಡುತ್ತೇವೆ. ತಮಗೆಲ್ಲಾ ಗೊತ್ತಿರುವ ಹಾಗೆ, ಪವರ್ ಶಾರ್ಟೇಜ್ ಇದೆ. ನಮ್ಮ ರಾಜ್ಯಕ್ಕೆ ಒಟ್ಟು ೨೦ ಸಾವಿರ ಮಿಲಿಯನ್ ಯೂನಿಟ್‌ನಷ್ಟು ಬೇಡಿಕೆ ಇದೆ. ಆದರೆ ಪ್ರೊಡಕ್ಷನ್ ಇರುವುದು ೧೪ ಸಾವಿರ ಮಿಲಿಯನ್ ಯೂನಿಟ್ ಮಾತ್ರ. ಗ್ಯಾಪ್ ಸ್ವಲ್ಪ ಜಾಸ್ತಿ ಇದೆ. ಈ ಮಧ್ಯೆ ಮಹಾರಾಷ್ಟ್ರ ರಾಜ್ಯ ಸರ್ಕಾರದವರು ನಮಗೆ ಪವರ್ ಕೊಡುತ್ತಿದ್ದರು, ಅವರಿಗೆ ಸ್ವಲ್ಪ ಹಣವನ್ನು ನಾವು ಕೊಡಬೇಕಾಗಿದ್ದರಿಂದ ಅವರು ಪವರ್ ಕೊಡುವುದನ್ನು ಸ್ವಲ್ಪ ಕಾಲ ನಿಲ್ಲಿಸಿದ್ದರು. ಈಗ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅವರು ಪವರ್ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇನ್ನು ಮುಂದೆ ಅವರು ಪವರ್ ಸಪ್ಲೈ ಮಾಡುತ್ತಾರೆ. ಸಧ್ಯದಲ್ಲೇ ಎಲ್ಲಾ ಕಾರ್ಯಕ್ರಮಗಳು ಪ್ರಾರಂಭವಾಗಲಿವೆ.

ಅಧ್ಯಕ್ಷರು.—ಆಗಲೇ ಸದನದಲ್ಲಿ ಇಲ್ಲದ ಮಾನ್ಯ ಸದಸ್ಯರುಗಳ ಹೆಸರನ್ನು ಕರೆಯುತ್ತೇನೆ. ಶ್ರೀ ಪಿ. ಸಿ. ಸಿದ್ದನಗೌಡರ್, ಆಬ್ಸೆಂಟ್. ಶ್ರೀ ಎಸ್. ಆರ್. ಮೋರೆ, ಆಬ್ಸೆಂಟ್, ಶ್ರೀ ಕೆ. ಸಿ. ಪೊಡ್ಡೇಕರ್ ದೇಸಾಯಿ.

ಬೆಳಗಾವಿ ಜಿಲ್ಲೆಯಲ್ಲಿ ಕರ್ನಾಟಕ ಹಣಕಾಸು ಸಂಸ್ಥೆಯಿಂದ ಹಂಚಿದ ಸಾಲದ ಬಗ್ಗೆ

೯೯೮. ಶ್ರೀ ಕೆ. ಸಿ. ಪೊಡ್ಡೇಕರ್ ದೇಸಾಯಿ (ಬಾಗೇವಾಡಿ).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು, ಬೆಳಗಾಂ ಜಿಲ್ಲೆಯಲ್ಲಿ ದಿನಾಂಕ ೩೧-೪-೧೯೯೦ ರವರೆಗೆ ಸಾಲವಾಗಿ ವಿತರಿಸಿದ ಹಣದ ಮೊತ್ತ ;

(ಆ) ಸಾಲ ತೆಗೆದುಕೊಂಡಿರುವವರ ಸಂಖ್ಯೆ ;

(ಇ) ಈವರೆಗೆ ವಸೂಲು ಮಾಡಿರುವ ಮೊತ್ತ ;

(ಈ) ಒಟ್ಟು ಎಷ್ಟು ಜನರಿಂದ ಸಾಲದ ಬಾಕಿ ಬರಬೇಕಾಗಿದೆ ಮತ್ತು ವಸೂಲಾತಿಯಾಗದಿರುವುದಕ್ಕೆ ಕಾರಣಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮತ್ತು ಅಬಕಾರಿ ಸಚಿವರು).—

(ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ೩೧-೩-೧೯೯೦ ರವರೆಗೆ ಬೆಳಗಾಂ ಜಿಲ್ಲೆಗೆ ೪೪.೨೮ ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದೆ.

(ಆ) ೩೧-೩-೧೯೯೦ ರವರೆಗೆ ಸುಮಾರು ೨,೪೦೦ ಉದ್ಯಮಿಗಳನ್ನೊಳಗೊಂಡಂತೆ ೩,೨೪೦ ಸಾಲ ಖಾತೆಗಳಿಗೆ ಸಾಲವನ್ನು ವಿತರಣೆ ಮಾಡಲಾಗಿದೆ.

(ಇ) ೩೧-೩-೧೯೯೦ ರವರೆವಿಗೆ ೨೪.೫೯ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದೆ.

(ಈ) ೩೧-೩-೧೯೯೦ ರವರೆವಿಗೆ ೨,೨೮೭ ಉದ್ಯಮಿಗಳಿಂದ ಸಾಲ ಬಾಕಿ ಇದೆ. ಇವುಗಳಲ್ಲಿ ೧,೪೦೪ ಸುಸ್ತಿದಾರರಾಗಿದ್ದು ಅವರಲ್ಲಿ ಸಣ್ಣ ಪುಟ್ಟ ಸ್ವರೂಪದ ಸುಸ್ತಿದಾರರು ದೊಡ್ಡ ಸ್ವರೂಪದ

ಸುಸ್ತಿದಾರರಂ ಮತ್ತು ಅತಿ ದೊಡ್ಡ (Chronical) ಸುಸ್ತಿದಾರರು ಇದ್ದಾರೆ. ಚಾಲ್ತಿ ಬಂಡವಾಳ ದೊರೆಯದಿರುವುದು, ಕಚ್ಚಾ ಪದಾರ್ಥಗಳ ಪೂರೈಕೆಯ ಅಭಾವ, ಕಾರ್ಯರೂಪಣೆಯಲ್ಲಿ ವಿಳಂಬ, ನಿರ್ವಹಣಾ ಸಮಸ್ಯೆ, ವಿದ್ಯುತ್‌ಕಡಿತ ಮುಂತಾದವುಗಳು ಸುಸ್ತಿದಾರ ಘಟಕಗಳು ಬಾಕಿ ಹಣವನ್ನು ಪಾವತಿ ಮಾಡದಿರುವುದಕ್ಕೆ ಕಾರಣಗಳಾಗಿವೆ. ಬಾಕಿ ವಸೂಲಾತಿ ಕ್ರಮವನ್ನು ವಿವಿಧ ಹಂತದಲ್ಲಿ ಮುಂದುವರಿಸಲಾಗುತ್ತಿದೆ.

SRI K. C. MODGEKAR DESAI.—Whether the Government would take necessary action for recovery of loan amount from the defaulters majority of whom are chronic defaulters ?

SRI M. RAJASHEKARA MURTHY.—Action is being taken for recovery.

SRI K. C. MODGEKAR DESAI.—Whether the Minister would tell what kind of action would be taken ? Please explain the 'necessary action'.

SRI M. RAJASHEKARA MURTHY.—In general, we have been issuing notices in all cases for confiscation of property and then we are going to auction them also.

SRI K. C. MODGEKAR DESAI.—The Hon. Minister has given many reasons for non-recovery such as working capital, scarcity of raw materials, power cut etc. If these are the reasons, then whether the Government is going to waive off 50% of K. S. F. C. loan ?

ಶ್ರೀ ಎಂ. ರಾಜಶೇಖರ ಮೂರ್ತಿ.—ಮಾನ್ಯ ಅಧ್ಯಕ್ಷರೇ, ಅನೇಕ ಕಾರಣಗಳಿಗಾಗಿ ಸಿಕ್ ಯೂನಿಟ್‌ಗಳಾಗುತ್ತವೆ. ಸಿಕ್ ಯೂನಿಟ್‌ಗಳ ಬಗ್ಗೆ ರಿಸರ್ವ್ ಬ್ಯಾಂಕ್‌ನವರು ಒಂದು ಗೈಡ್‌ಲೈನ್‌ನ್ನು ಕೊಟ್ಟಿದ್ದಾರೆ. ಸಿಕ್ ಯೂನಿಟ್ಸ್ ಎಂದು ಟ್ರೀಟ್ ಮಾಡಿದರೆ ಅವಕ್ಕೆ ಯಾವ ಯಾವ ರೀತಿ ರಿಯಾಯಿತಿ ಕೊಡಬೇಕಂ ಎನ್ನುವುದಕ್ಕೆ ಗೈಡ್‌ಲೈನ್ ಇದೆ. ಅದನ್ನು ಕೊಡಲಿಕ್ಕೆ ಕೆ.ಎಸ್.ಎಫ್.ಸಿ. ತಯಾರಿದೆ. ಆಮೇಲೆ ಬೆಳಗಾಂ ಜಿಲ್ಲೆಯಲ್ಲಿ ಸಾಲದ ರೆಕವರಿ ಚೆನ್ನಾಗಿದೆ. ಸ್ಟೇಟ್ ಆವರೇಜ್ ಡಿಫಾಲ್ಟರ್ಸ್ ೧೬ ಪರ್ಸೆಂಟ್ ಇದ್ದರೆ ಬೆಳಗಾಂನಲ್ಲಿ ಕೇವಲ ೯ ಪರ್ಸೆಂಟ್ ಇದೆ.

ಅಧ್ಯಕ್ಷರು.—ಶ್ರೀ ಎಂ. ಬಿ. ದಿವಟರ್, ಆಬ್ಸೆಂಟ್. ಈಗ ಪ್ರಶ್ನೋತ್ತರ ಕಾಲ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು

ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕಲ್ಲಿದ್ದಲಿನ ಕೊರತೆ ಬಗ್ಗೆ

೬೪೧ ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಕೈಗಾರಿಕಾ, ಇಂಧನ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕಲ್ಲಿದ್ದಲಿನ ಕೊರತೆಯಿರುವುದು ನಿಜವೆ ;

(ಆ) ಹಾಗಿದ್ದಲ್ಲಿ ಎಷ್ಟು ಕಲ್ಲಿದ್ದಲಿನ ಕೊರತೆ ಇದೆ ;

(ಇ) ಈ ಕಲ್ಲಿದ್ದಲಿನ ಕೊರತೆಯ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರದ ಕಲ್ಲಿದ್ದಲು ನಿಗಮಕ್ಕೆ ಮನವಿ ಮಾಡಿದೆಯೆ ;

(ಈ) ಈ ಕೊರತೆಯನ್ನು ನೀಗಲು ರಾಜ್ಯ ಸರ್ಕಾರವು ಕೈಗೊಂಡಿರುವ ಇತರ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ಪಕ್ಷ ಸಚಿವರು).—

(೨) ಹೌದು.